ಶ್ರೀ ಸಂಜೀವನಾಥ ಐಕಳ.—ಪಡಿ ಗಜ್ಜೆ ಸಾಲ್ಟ್ ವಾಟರ್ ಎಕ್ಸ್‌ಕ್ಲೂಷನ್ ಪೆಂಟೆಡ್ ಡ್ಯಾಮಿನ ಎಸ್ಟಿಮೇಟು 1956 ನೇ ಇಸವಿಯಲ್ಲಿಯೇ ತಯಾರಾಗಿ ಅದು ಸ್ಯಾಂಕ್ಷನ್ ಆಗಿತ್ತು. ಆ ವಿಷಯದಲ್ಲಿ ಎಷ್ಟು ಸಾರಿ ಸರ್ಕಾರಕ್ಕೆ ಬರೆದರೂ ಕೂಡ ಆ ಕೆಲಸವನ್ನು ತೆಗೆದುಕೊಳ್ಳದೆ ಇರುವುದಕ್ಕೆ ಪ್ರಬಲವಾದ ರಾಜಕೀಯ ಕಾರಣಗಳೇನು ?

ಶ್ರೀ ಆಲೂರು ಹನುಮಂತಪ್ಪ.—ಆ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಎಸ್. ಶಿವಪ್ಪ.—ಮಾನ್ಯ ಉಪ ಮಂತ್ರಿಗಳು ಆಗಿಂದಾಗ್ಗೆ ದೇಶದಲ್ಲಿ ಭೂ ಸಂಚಾರ ಮಾಡಿ ಸರ್ವೆಮಾಡಿ ಕೆಲವು ಯೋಜನೆಗಳನ್ನು ತಯಾರು ಮಾಡಿದ್ದಾರೆ. ಇನ್ನು ಮುಂದೆ ಅವರು ಗಾಳಿ ಸಂಚಾರ ಮಾಡುವುದಾದರೆ ಆ ಯೋಜನೆಗಳಿಗೆ ದುಡ್ಡು ಎಲ್ಲಿಂದ ಹೇಗೆ ಬರುತ್ತದೆ ಎಂಬುದನ್ನು ನಿರ್ಧಾರ ಮಾಡುವುದಕ್ಕೆ ಬರುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ ಎನ್ನುವುದು ನಿರ್ವಿವಾದವಾದ ವಿಷಯ. ಆದರೆ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಅವರ ಸಹಪಾಠಿಗಳು ಸರ್ಕಾರದ ಜೊತೆಯಲ್ಲಿ ಸಹಕರಿಸುವುದಾದರೆ ನಾವು ಹೆಚ್ಚು ಹಣವನ್ನು ಒದಗಿಸಬಹುದು.

ಶ್ರೀ ಬಿ. ಭಾನ್ಮರಶೆಟ್ಟಿ.—ಈ 121 ಯೋಜನೆಗಳಿಗೆ ಯಾವಾಗ ಹಣ ಬರುತ್ತದೆ ಮತ್ತು ಅವುಗಳನ್ನು ಯಾವಾಗ ಕಂಪ್ಲೀಟ್ ಮಾಡುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಆದಷ್ಟು ಮಾಡಬೇಕೆಂಬುದು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಂಜೀವನಾಥ ಐಕಳ.—"Vented dam across Kateel river in Delanthabettu Village, Mangalore Taluk". ಈ ಯೋಜನೆಯನ್ನು ಹೋದ ವರ್ಷದ ಅಡಿಷನಲ್ ಸೆಂಟ್ರಲ್ ಗ್ರಾಂಟಿನಲ್ಲಿ ಇನ್‌ಕ್ಲೂಡ್ ಮಾಡಿ, ಅದನ್ನು ಈಗ ತೆಗೆದುಹಾಕಲಿಕ್ಕೆ ರಾಜಕೀಯ ಕಾರಣ ಉಂಟು, ಅಲ್ಲವೆ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ.

ಶ್ರೀ ಎಸ್ ನುಬ್ಬಯ್ಯ ನಾಯ ಕ.—ಈ 103 ಪ್ರಾಜೆಕ್ಟುಗಳನ್ನು ಯಾವ ಆಧಾರದ ಮೇಲೆ ತೆಗೆದುಕೊಳ್ಳುತ್ತೀರಿ ?—ಅದಕ್ಕೆ ಪ್ರಯಾರಿಟಿ ಏನು ? ಹಣ ಒದಗಿದಾಗ ತೆಗೆದುಕೊಳ್ಳುತ್ತೀರ, ಅಥವ ಹೆಚ್ಚಿಗೆ ನೀರಾವರಿ ಆಗುತ್ತದೆ ಅನ್ನುವುದರ ಮೇಲೆ ತೆಗೆದುಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅವಶ್ಯಕತೆ ಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ಧಾರವಾಡ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಾ ಇರುವಾಗ, 140 ಕೋಟಿ ರೂಪಾಯಿಗಳ ಹಣವನ್ನು ನೀರಾವರಿ ಕಾಮಗಾರಿಗಳಿಗೋಸ್ಕರವಾಗಿ ಕೇಂದ್ರ ಸರಕಾರವನ್ನು ಕೇಳಿದ್ದೇವೆ ಅಂತ ತಾವು ಭಾಷಣಮಾಡುತ್ತಾ ಹೇಳಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾವು ತಯಾರು ಮಾಡಿರತಕ್ಕ ಕೋಟ್ಯಂತರ ರೂಪಾಯಿಗಳ ಪ್ರಾಜೆಕ್ಟುಗಳನ್ನು ಪೂರೈಸುವುದಕ್ಕೋಸ್ಕರ ಬೇಕಾದ ಹಣವನ್ನು ಕೊಡುತ್ತೇವೆಂದು ಹೇಳಿರುವುದನ್ನು, ಕೇಂದ್ರಸರಕಾರ ಕೇಳಿ ಆಶ್ವಾಸನೆ ಕೊಟ್ಟಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.— 120 ಕೋಟಿಗಳು ಒಂದೇ ಯೋಜನೆಯಲ್ಲಿ ಮುಕ್ತಾಯವಾಗುವಂಥಾದ್ದಲ್ಲ.

Total Resources of the State during the Third Five-Year Plan.

*Q.—91. Sri G. V. GOWDA (Palyam).—

Will the Government be pleased to state :—

(*a*) the percentage of Central assistance to Mysore State during the Second Five-Year Plan ;

(*b*) the percentage of Central assistance to Mysore State during the Third Five-Year Plan ;

(*c*) the total resources of the State in the Third Five-Year Plan ?

A.—Sri B. D. JATTI (Minister for Finance).—

(*a*) 49.
(*b*) 56.
(*c*) Rs. 110 crores as promised, but there will be shortfall in the State's resources.

Sri G. V. GOWDA.—May I know the shortfall for the current year in the 3rd five year plan ?

Sri B. D. JATTI.—The shortfall may be about Rs. 30 to 35 crores for the entire plan period and Rs. 12 to 13 crores for the current financial year.

Sri G. V. GOWDA.—When there is shortfall, is there any cut in the outlay of the grant ?

Sri B. D. JATTI.—Government of Mysore is trying to get more assistance from Government of India. If they give aid according to the expectation, there may not be any necessity to cut the size of the 3rd five year plan, but along with that our performance also will be observed by the Government of India.

Sri G. V. GOWDA.—Is the reduction of resources mainly due to deficit of the revenue account as well the capital ?

Sri B. D. JATTI.—It is due to both but mairnely due to capital account. We would have got money from the building tax. But it has been struck down in the High Court.

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರಕಾರದ ಮೇಲೆ ಮೈಸೂರು ಸರಕಾರ ಶಕ್ತಿಯುತವಾದಂಥ ಪ್ರಭಾವವನ್ನು ಬೀರಲು ಯೋಗ್ಯತೆ ಕಳೆದುಕೊಂಡಿರುವುದೇ ಕೇಂದ್ರ ಸರಕಾರದ ನೆರವು ಪಡೆಯದೆ ಇರುವ ಪರಿಸ್ಥಿತಿಗೆ ಬಂದಿರುವುದಕ್ಕೆ ಕಾರಣವಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಯಾವ ಅರ್ಥದಲ್ಲಿ ಹೇಳುತ್ತಾರೊ ! ನಮ್ಮ ಯೋಗ್ಯತೆಗಿಂತ ಹೆಚ್ಚಾಗಿ ಕೊಟ್ಟಿದ್ದಾರೆ, ಅವರಿಗೆ ಅರ್ಥವಾಗಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—35 ಕೋಟಿ ರೂಪಾಯಿ ಕಡಿಮೆ ಬೀಳಬಹುದು ಎಂದು ಹೇಳಿದಿರಿ. ಅದು ಓವರಾಲ್ ಪ್ಲಾನಿಂಗಿನಲ್ಲೊ ?

ಶ್ರೀ ಬಿ. ಡಿ. ಜತ್ತಿ.—ಓವರಾಲ್ ಪ್ಲಾನಿಂಗ್ ಸ್ಕೀಮಿನಲ್ಲಿ 35 ಕೋಟಿ ರೂಪಾಯಿ ಕಡಿಮೆ ಬೀಳಬಹುದು.

Sri S. M. KRISHNA.—The optimism of the Finance Minister depends on the hypothetical proposition in the Central Government to step in to pay this Government by advancing or by subsidising to the tune of 35 crores of Rupees. Now, I would like to know from the Finance Minister if they did not visualise this gap in the 3rd five year plan ? Is it not a fact that repeatedly, we on this side of the House have drawn the attention of the State Government to the fact that the gap that might be left in due course about the 3rd five year plan, and if so why this Government has not taken any serious steps to tackle this problem ?

Sri B. D. JATTI.—Government have taken all possible serious steps for the remaining period. We hope we will perform well and the Government of India can also help us well.

Sri G. V. GOWDA.—Is this short fall of 35 crores of rupees due to over all size of 250 crores ?

Sri B. D. JATTI.—In the Governor's address, we have stated that an amount of Rs. 250 crores will be spent by the end of the 3rd five year plan.

Sri S. SIVAPPA.—In the Governor's address it is stated that an amount of Rs. 250 crores will be spent. The Hon'ble Finance Minister says that over all picture of the deficit is 30 to 40 crores-a revealing factor has been made. Is it not a fact that when this Government approached the Central Government for financial assistance they remarked that since the Mysore Government has spent for non-plan project, it does not deserve any further assistance ?

Sri B. D. JATTI.—This is an information I am getting from the Leader of the Opposition.

Sri G. V. GOWDA.—So far as (*a*) and (*b*) in the question are concerned, there is a sort of confusion. I would like to know the total amount of central assistance given to all the States for the 3rd five year plan.

Sri B. D. JATTI.—As far as the States in the Southern Zone are concerned, I have got comparative figures.

Andhra Pradesh	...	65.6 per cent.
Madras	...	65.15 per cent.
Kerala	...	65.9 per cent.
Mysore	...	56 per cent.

Sri S. SIVAPPA.—Out of the Central assistance of Rs. 140 crores promised by the Centre, how much out of this has been diverted to non-plan projects.

Sri B. D. JATTI.—Centrally sponsored schemes are termed as non-plan schemes. They do not come within the plan ceiling.

ಶ್ರೀ ಎಸ್. ಎಂ. ಗುರೆಡ್ಡಿ.—ಸೆಂಟ್ರಲ್ ಅಸಿಸ್ಟೆನ್ಸು ಮದ್ರಾಸು, ಕೇರಳ ಮತ್ತು ಆಂಧ್ರ ಪ್ರದೇಶಕ್ಕೆ ಹೆಚ್ಚಿಗೆ ಪರ್ಸೆಂಟೇಜು ಕೊಟ್ಟು, ಮೈಸೂರಿಗೆ ಕೊಟ್ಟಿರುವ ಪರ್ಸೆಂಟೇಜು ಕಡಿಮೆ ಆಗಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—2ನೇ ಪಂಚವಾರ್ಷಿಕ ಯೋಜನೆಯಲ್ಲಿ 49 ಪರ್ಸೆಂಟು ಕೊಟ್ಟಿದ್ದರು, ಹೆಚ್ಚಿಗೆ ಹೊಡೆದಾಡಿದ್ದರ ಮೇಲೆ 56 ಪರ್ಸೆಂಟು ಕೊಟ್ಟಿದ್ದಾರೆ. ಇನ್ನೂ ಹೆಚ್ಚಿಗೆ ಹೊಡಿದಾಡಿದರೆ ಹೆಚ್ಚಿಗೆ ಹಣ ಕೊಡುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಮಂತ್ರಿಗಳು ಹೊಡೆದಾಡುತ್ತಲೇ ಬಂದಿದ್ದಾರೆ. ಆಂಧ್ರ, ಮದ್ರಾಸು, ಕೇರಳದ ಮಟ್ಟಕ್ಕೆ ಮುಟ್ಟಬೇಕಾದರೆ, ಇನ್ನೆಷ್ಟು ವರ್ಷ ಅವರು ಹೊಡೆದಾಟ ನಡೆಸಬೇಕಾಗುತ್ತದೆ ?

ಶ್ರೀ ಬಿ. ಡಿ. ಜತ್ತಿ.—ನಾವೆಲ್ಲಾ ಮನಸ್ಸು ಮಾಡಿದರೆ ಈಗಲೇ ಆಗಬಹುದು.

Total amount of money raised from the internal resources during the last 4 years of the State 3rd Five-Year Plan.

*Q.—96. Sri G. V. GOWDA (Palyam).—

Will the Government be pleased to state ;

(*a*) the total amount of money raised from internal resources during the last 4 years of the State 3rd Five Year Plan ;